# ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 477/2023

ಚಾಸಾ 30 ಫ್ರಾಸಾ 25

| | | |
|---|---|---|
| ಸಾಕ್ಷಿಯ ಹೆಸರು | : | ಮರಿಸಿದ್ದಶೆಟ್ಟಿ |
| ತಂದೆಯ ಹೆಸರು | : | ಲೇಟ್ ರಂಗಶೆಟ್ಟಿ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಐ |
| ವಾಸ ಸ್ಥಳ | : | ಮೈಸೂರು |

ದಿನಾಂಕ 02.04.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ನಾನು ನವೆಂಬರ್ 2013 ರಿಂದ ಜನವರಿ 2016 ರವರೆಗೆ ಮ.ಮ. ಬೆಟ್ಟ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20.12.2014 ರಂದು ಚಾಸಾ–28 ರವರಿಂದ ಕೇಸಿನ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ 12.01.2015 ರಂದು ಚಾಸಾ–2 ರವರು ಹಾಜರುಪಡಿಸಿದ ದಾಖಲಾತಿಗಳನ್ನು ಪಡೆದು ಚಾಸಾ–3 ಮತ್ತು 4 ರವರ ಸಮಕ್ಷಮ ಮಧ್ಯಾಹ 3.00 ಗಂಟೆಯಿಂದ 4.30 ರವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು ಪಿ.ಎಫ್. ನಂಬರ್ 03/2015 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದಾಖಲೆ 1, 11, 17, 23, 24, 25, 29, 30, 31, 49, 59, 62 ರಿಂದ 65 ದಾಖಲೆಗಳು ಜೆರಾಕ್ಸ್ ಪ್ರತಿಗಳಾಗಿರುತ್ತವೆ. ಉಳಿದ ದಾಖಲೆಗಳು ಮೂಲ ಪ್ರತಿಗಳಾಗಿರುತ್ತವೆ. ಸಾಕ್ಷಿಯು ಅಮಾನತ್ತು ಮಹಜರ್ ನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–29 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–29(ಸಿ) ಎಂದು ಗುರುತಿಸಲಾಯಿತು.

ದಿನಾಂಕ 29.01.2015 ರಂದು ಈ ಪ್ರಕರಣದಲ್ಲಿ ಕಲಂ 409 ಐ.ಪಿ.ಸಿ. ಸೇರ್ಪಡೆ ಮಾಡಿಕೊಳ್ಳಲು ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 25.03.2015 ರಂದು ಸಿ.ಡಿ.ಆರ್. ಮತ್ತು ಆರೋಪಿಯ ಟವರ್ ಲೊಕೇಷನ್ ನೀಡುವಂತೆ ಕೋರಿ ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿಗಳಿಗೆ ಪತ್ರ ಬರೆದಿರುತ್ತೇವೆ. ದಿನಾಂಕ 28.03.2015 ರಂದು ಚಾಸಾ–9 ರಿಂದ 21 ರವರಿಗೆ ನೊಟೀಸ್ ಜಾರಿ ಮಾಡಿರುತ್ತೇನೆ. ದಿನಾಂಕ 20.04.2015 ರಂದು ಆರೋಪಿಯು ಮಾನ್ಯ ಉಚ್ಚ

ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಅದರಂತೆ ಸೂಕ್ತ ಠಾಣಾ ಜಾಮೀನು ಪಡೆದು ಆರೋಪಿಯನ್ನು ಬಿಡುಗಡೆ ಮಾಡಿರುತ್ತೇನೆ. ದಿನಾಂಕ 16.06.2015 ರಂದು ಸಹಾಯಕ ಕಾರ್ಯ ನಿರ್ವಾಹಕ ಅಧಿಕಾರಿಗಳು, ಮ.ಮ. ಬೆಟ್ಟ ರವರಿಗೆ ಲೆಡ್ಜರ್ ಬುಕ್ ಮತ್ತು ರಶೀದಿ ಪುಸ್ತಕವನ್ನು ನೀಡುವಂತೆ ಕೋರಿ ಪತ್ರ ಬರೆದಿರುತ್ತೇನೆ.

ದಿನಾಂಕ 01.07.2015 ರಂದು ಚಾಸಾ–3 ರವರು ಲೆಡ್ಜರ್ ಬುಕ್ ಮತ್ತು ರಶೀದಿ ಪುಸ್ತಕವನ್ನು ಠಾಣೆಗೆ ತಂದು ಹಾಜರುಪಡಿಸಿದ ಮೇರೆಗೆ ಅವುಗಳನ್ನು ಚಾಸಾ–5 ಮತ್ತು 6 ರವರ ಸಮಕ್ಷಮ ಸಂಜೆ 5.30 ರಿಂದ 6.30 ಗಂಟೆಯವರಗೆ ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅವುಗಳನ್ನು ಮಾಲುಪಟ್ಟಿ ಸಂಖ್ಯೆ 30/2015 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಅಮಾನತ್ತು ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅಮಾನತ್ತು ಮಹಜರ್ ನ್ನು ಈಗಾಗಲೇ ನಿಪಿ–28 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–28(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–9 ರಿಂದ 21 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 28.07.2015 ರಂದು ಚಾಮರಾಜನಗರ ಆಡಿಟರ್ ರವರಿಗೆ ಆಡಿಟ್ ವರದಿ ಕೋರಿ ಪತ್ರ ಬರೆದಿರುತ್ತೇವೆ. ದಿನಾಂಕ 14.12.2015 ರಂದು ಆರೋಪಿಯ ಮಾದರಿ ಸಹಿ ಮತ್ತು ಬರವಣಿಗೆಯನ್ನು ಕೋರಿ ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 16.12.2015 ರಂದು ಆರೋಪಿಯ ಮಾದರಿ ಸಹಿ ಮತ್ತು ಬರವಣಿಗೆಯೊಂದಿಗೆ ಲೆಡ್ಜರ್ ಬುಕ್ ಗಳ ಜೆರಾಕ್ಸ್ ಪ್ರತಿಗಳನ್ನು ಎಫ್.ಎಸ್.ಎಲ್.ಗೆ ಸಿಬ್ಬಂದಿ ನಾಗೇಂದ್ರ ರವರ ಮೂಲಕ ಡಿ.ವೈ.ಎಸ್.ಪಿ. ರವರ ಕಚೇರಿ ಮೂಲಕ ಕಳುಹಿಸಿರುತ್ತೇನೆ. ದಿನಾಂಕ 20.12.2015 ರಂದು ಸಿಬ್ಬಂದಿ ನಾಗೇಂದ್ರರವರು ಎಫ್.ಎಸ್.ಎಲ್.ನಿಂದ ಸ್ವೀಕೃತಿ ಹಾಜರುಪಡಿಸಿದ್ದು ಅದನ್ನು ಪಡೆದುಕೊಂಡಿರುತ್ತೇನೆ. ನಂತರ ನನಗೆ ವರ್ಗಾವಣೆ ಆದ ಕಾರಣ ಕಡತವನ್ನು ಚಾಸಾ–31 ರವರಿಗೆ ಹಸ್ತಾಂತರಿಸಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.